

# ಕಾರ್ತಿಕ್ ಕಾಳಜಿ

ಕಾರ್ತಿಕ್ ಆರ್ಯನ್ ಕೊರೊನಾ ಕಡ್ಡಾಯ ರಜೆಯಲ್ಲಿ ಸುಮ್ಮನೆ ಕುಳಿತಿಲ್ಲ. ಶೂಟಿಂಗ್ ನಿಂತಿದ್ದರೂ ಈತನ ಕ್ಯಾಮೆರಾ ಶೂಟಿಂಗ್ ಮುಂದುವರಿದಿದೆ. ಯೂಟ್ಯೂಬ್‌ನಲ್ಲಿ ತನ್ನದೇ ಆದ ಕಾರ್ಯಕ್ರಮಗಳನ್ನು ಈತ ಪ್ರಸ್ತುತ ಪಡಿಸುತ್ತಿದ್ದಾನೆ. 'ಕೋಕಿ ಪೂಚೇಗಾ' ಎನ್ನುವುದು ಆತನ ಕಾರ್ಯಕ್ರಮದ ಹೆಸರು. ಸಾರ್ವಜನಿಕ ಮಹತ್ವದ ವಿಷಯಗಳಿಗೆ ಸಂಬಂಧಿಸಿ ವಿಡಿಯೊಗಳನ್ನು ಮಾಡಿ ಸಾಮಾಜಿಕ ಎಚ್ಚರ ಮೂಡಿಸುವುದು ಆತನ ಉದ್ದೇಶ.

ಈಗ ಯೂಟ್ಯೂಬ್‌ನಲ್ಲಿ ಸುದ್ದಿ ಮಾಡುತ್ತಿರುವ ಆತನ ಎರಡನೇ ವಿಡಿಯೊದಲ್ಲಿ ಅಹ್ಮದಾಬಾದ್‌ನ ಡಾಕ್ಟರ್ ಮೀಮಾಂಸಾ ಬುಚ್ ಜೊತೆಗಿನ ಸಂದರ್ಶನ ಸಾಕಷ್ಟು ಹಿಟ್ ಆಗಿದೆ. ಕೊರೊನಾ ಪೀಡಿತರನ್ನು ಗುಣಪಡಿಸಿದ ಈ ಡಾಕ್ಟರ್, ಕೊರೊನಾ ಕುರಿತ ಹಲವು ಮಿಥ್ಯೆಗಳನ್ನು ಕಾರ್ತಿಕ್ ಸಂದರ್ಶನದಲ್ಲಿ ಬಹಿರಂಗಪಡಿಸಿದ್ದಾರೆ. ನಡುನಡುವೆ ತಮಾಷೆಯ ಪ್ರಶ್ನೆಗಳನ್ನು ಕೇಳುತ್ತಾ ಸಂದರ್ಶನವನ್ನು ಸ್ವಾರಸ್ಯಕರವಾಗಿ ಮಾಡಿರುವುದು ಕಾರ್ತಿಕ್ ಅಭಿಮಾನಿಗಳಿಗೂ ಖುಷಿ ಕೊಟ್ಟಿದೆ.

# ಮತ್ತೊಮ್ಮೆ ಬಂಟಿ-ಬಬ್ಲೀ

ಹದಿನೈದು ವರ್ಷಗಳ ಹಿಂದೆ ಬಾಲಿವುಡ್‌ನಲ್ಲಿ ಹೊಸ ಹುಮ್ಮಸ್ಸು ಮೂಡಿಸಿದ ಸೂಪರ್‌ಹಿಟ್ ಮನರಂಜನೆಯ ಚಿತ್ರ 'ಬಂಟಿ ಔರ್ ಬಬ್ಲೀ'. ತನ್ನ ವೃತ್ತಿಜೀವನದಲ್ಲಿ ಆರಕ್ಕೇರದೆ ಮೂರಕ್ಕಿಳಿಯದೆ ಇದ್ದ ಅಭಿಷೇಕ್ ಬಚ್ಚನ್‌ಗೆ ಸ್ವಲ್ಪ ಹೊಳಪು ಕೊಟ್ಟ ಚಿತ್ರವದು. ಅಭಿಷೇಕ್ ಮತ್ತು ರಾಣಿ ಮುಖರ್ಜಿ ಇಬ್ಬರೂ ಈ ಸಿನಿಮಾ ಯಶಸ್ಸಿನ ಬಳಿಕ ಸಾಕಷ್ಟು ಅವಕಾಶಗಳನ್ನೂ ಪಡೆದರು. ಈಗ ಆ ಚಿತ್ರದ ಎರಡನೇ ಭಾಗ ಬರಲಿದೆ. ಆದರೆ ಈ ಸೀಕ್ವೆಲ್‌ನಲ್ಲಿ ರಾಣಿ ಮುಖರ್ಜಿ ಜೊತೆಗೆ ಹೀರೊ ಆಗಿ ನಟಿಸುತ್ತಿರುವುದು ಸೈಫ್ ಅಲಿಖಾನ್. ಸೈಫ್‌ಗೆ ಅವಕಾಶ ಕೊಟ್ಟಿರುವ ನಿರ್ದೇಶಕ ಆದಿತ್ಯ ಚೋಪ್ರಾ, 'ವೆಲ್‌ಕಮ್ ಬ್ಯಾಕ್ ಹೋಮ್' ಎಂದು ಸಂದೇಶ ಕಳುಹಿಸಿರುವುದು ಎಲ್ಲರಲ್ಲಿ ಕುತೂಹಲ ಮೂಡಿಸಿದೆ.



ಕಳೆದ 11 ವರ್ಷಗಳಿಂದ ಆದಿತ್ಯ ಮತ್ತು ಸೈಫ್ ಜೊತೆಯಾಗಿ ಕೆಲಸ ಮಾಡಿಲ್ಲ. ಇಬ್ಬರ ನಡುವೆ ಯಾವುದೋ ವಿಷಯಕ್ಕೆ ವೈಮನಸ್ಯ ಮೂಡಿ ದೂರವಾಗಿದ್ದರು. ಈಗ ಆದಿತ್ಯ ಚೋಪ್ರಾ ಮೆಸೇಜ್ ನೋಡಿ ಸೈಫ್ ಥ್ರಿಲ್ ಆಗಿದ್ದಾನೆ. 'ಆದಿ ಜೊತೆಗೆ ಮತ್ತೆ ಕೆಲಸ ಮಾಡಲು ಖುಷಿಯಾಗುತ್ತಿದೆ. ನನ್ನ ಕೆಲವು ಧೋರಣೆಗಳು ಆದಿಗೆ ಆಗ ಹಿಡಿಸಿಲ್ಲವಾದ್ದರಿಂದ ಜೊತೆಗೂಡಿ ಕೆಲಸ ಮಾಡಿಲ್ಲ. ಈಗ ಆತನ ಚಿತ್ರವೊಂದರಲ್ಲಿ ನಟಿಸುತ್ತಿರುವುದು ನಮ್ಮ ಸಂಬಂಧವನ್ನು ಉತ್ತಮಗೊಳಿಸಿದೆ. ಆದಿ ಬಾಲಿವುಡ್‌ನ ಅತ್ಯುತ್ತಮ ಸಿನಿಮಾ ಮೇಕರ್‌ಗಳಲ್ಲಿ ಒಬ್ಬ' ಎಂದೂ ಸೈಫ್ ಹೊಗಳಿದ್ದಾರೆ. ರಾಣಿ ಮುಖರ್ಜಿ ಜೊತೆಗೆ ಕೆಲಸ ಮಾಡುವುದೂ ಸೈಫ್ ಹುಮ್ಮಸ್ಸು ಮೂಡಿಸಿದೆಯಂತೆ.

ಕೊರೊನಾ ಹಬ್ಬುವುದಕ್ಕೆ ಮುಂಚೆಯೇ ಈ ಚಿತ್ರದ ಕೆಲವು ದೃಶ್ಯಗಳು ಅಬುದಾಭಿಯಲ್ಲಿ ಶೂಟ್ ಆಗಿತ್ತು. ಕೊರೊನಾ ಸುದ್ದಿ ಹಬ್ಬಿದಾಕ್ಷಣ ಚಿತ್ರತಂಡ ಭಾರತಕ್ಕೆ ವಾಪಸಾಗಿತ್ತು. 'ಕೊರೊನಾ ರಜೆ ಮುಗಿದ ಬಳಿಕ ಮತ್ತೆ ಅದೇ ಸ್ಥಳದಲ್ಲಿ ಶೂಟಿಂಗ್ ಮುಂದುವರಿಯಲಿದೆ' ಎಂದಿದ್ದಾನೆ ಆದಿತ್ಯ ಚೋಪ್ರಾ. ಜೂನ್‌ನಲ್ಲಿ ಚಿತ್ರ ಬಿಡುಗಡೆ ಎನ್ನುವುದು ಹಿಂದಿನ ನಿರ್ಧಾರವಾಗಿತ್ತು. ಈಗ ಚಿತ್ರದ ಬಿಡುಗಡೆ ಇನ್ನಷ್ಟು ತಿಂಗಳು ಮುಂದೆ ಹೋಗಬಹುದು.

■ ಬಿಂದು

